ಓ ಎಸ್ ಸಂಖ್ಯೆ: 101/2019

# ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

ಸಾಕ್ಷಿಯನ್ನು ದಿಃ 01.12.2021 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.

<u>ಪಾಟೀಸವಾಲುಃ</u> ಪ್ರತಿವಾದಿ ಪರ ಶ್ರೀ ಎಂ ಬಿ ವಕೀಲರಿಂದ ಃ

1. ನನ್ನ ತಾತನ ಹೆಸರು ದೊಡ್ಡ ಮಾರಯ್ಯ . ನನ್ನ ಅಜ್ಜಿ ಹೆಸರು ನಿಂಗಮ್ಮ . ನನ್ನ ಅಜ್ಜ ಮತ್ತು ಅಜ್ಜಿ ಯಾವ ವರ್ಷದಲ್ಲಿ ತೀರಿಹೋಗಿರುತ್ತಾರೆ ನನಗೆ ಗೊತ್ತಿಲ್ಲ. ದೊಡ್ಡ ಮಾರಯ್ಯ ಅವರಿಗೆ ಇಬ್ಬರು ಗಂಡು 3 ಹೆಣ್ಣು ಮಕ್ಕಳು. 1. ನನ್ನ ತಂದೆ ಚಿಕ್ಕ ಬೈರಯ್ಯ 2. ಸಿದ್ದಯ್ಯ 3 ರಿಂದ 5 ರವರ ಹೆಸರು ಗೊತ್ತಿಲ್ಲ .
2. ನನ್ನ ತಂದೆ ತೀರಿಹೋಗಿ 22 ವರ್ಷ ಆಗಿರುತ್ತದೆ. ದಿನಾಂಕ ತಿಂಗಳು ವರ್ಷ ಗೊತ್ತಿಲ್ಲ. ಅವರು ದಿ.19.11.1983 ರಲ್ಲಿ ತೀರಿಹೋಗಿರುತ್ತಾರೆ ಎಂದರೆ ಗೊತ್ತಿಲ್ಲ. ನನ್ನ ತಾಯಿ ಹೆಸರು ದೇವಮ್ಮ . ಅವರು ತೀರಿಹೋಗಿ 23 ವರ್ಷ ಆಗಿದ್ದು ನನ್ನ ತಂದೆ ತೀರಿಕೊಂಡ 3 ವರ್ಷ ನಂತರ ನನ್ನ ತಾಯಿ ತೀರಿಕೊಂಡಿರುತ್ತಾರೆ.
3. ನನ್ನ ತಂದೆಗೆ 3 ಜನ ಗಂಡು ಮಕ್ಕಳು ಇಬ್ಬರು ಹೆಣ್ಣು ಮಕ್ಕಳು 1. ಸಿದ್ದಯ್ಯ 2. ದೊಡ್ಡ ಸಿದ್ದಯ್ಯ 3. ಸಿದ್ದಮ್ಮ 4. ಕುಳ್ಳ ಬೋರಯ್ಯ 5. ಪುಟ್ಟಮ್ಮ. ನನ್ನನ್ನು ಹೊಂಬರಗಳಿಗೆ ಮದುವೆ ಮಾಡಿಕೊಟ್ಟಿರುತ್ತಾರೆ. ನನ್ನ ಮದುವೆ ಆದ ವರ್ಷ ನೆನಪಿಲ್ಲ. ನನ್ನ ಗಂಡನ ಹೆಸರು ಚಲುವಯ್ಯ. ಮದುವೆ ಆದ ಕೇವಲ 4 ವರ್ಷಗಳು ಮಾತ್ರ ಗಂಡನ ಮನೆಯಲ್ಲಿ ಇದ್ದು ನಂತರ ನನ್ನ ತಂದೆ ನ್ನನನ್ನು ತವರು ಮನೆಗೆ ಕರೆದುಕೊಂಡು ಬಂದರು . ಯಾವ ವರ್ಷ ಕರೆದಲುಕೊಂಡು ಬಂದರು ನೆನಪಿಲ್ಲ . ನನ್ನ ತಂದೆ ನನ್ನನ್ನು ಯಲಚಿಹಳ್ಳಿ ಗ್ರಾಮಕ್ಕೆ ಕರೆದುಕೊಂಡು ಬಂದರು ಯಲಚಿಹಳ್ಳಿ ಗ್ರಾಮದಲ್ಲಿ ನಾವು ನನ್ನ ತಂದೆ ಮನೆಯ ಒಟ್ಟುಕುಟುಂಬದಲ್ಲಿ ವಾಸವಾಗಿದ್ದೆ. ಆ ಕಾಲದಲ್ಲಿ ನನ್ನ ತಂದೆಗೆ ಮನೆ ಇರಲಿಲ್ಲ ಗುಡಿಸಲು

ಹಾಕಿಕೊಂಡಿದ್ದವು. ನಾನು ಕೂಡ ಅದೇ ಗುಡಸಿಲಿನಲ್ಲಿ ವಾಸವಾಗಿದ್ದೆ. ಈಗಲೂ ಕೂಡ ನಾವೆಲ್ಲರೂ ಒಟ್ಟಿಗೆ ಅದೇ ಗುಡಿಸಲಿನಲ್ಲಿ ವಾಸವಾಗಿದ್ದೇವೆ. ನಾನು , ನನ್ನ ಅಣ್ಣ ತಮ್ಮಂದಿರು , ಸಹೋದರಿಯರು ಅದೇ ಗುಡಿಸಿಲಿನಲ್ಲಿ ಒಟ್ಟಿಗೆ ಅದೇ ಗುಡಿಸಲಿನಲ್ಲಿ ವಾಸವಾಗಿದ್ದೇವೆ.ನಾವೆಲ್ಲರೂ ಒಟ್ಟಿಗೆ ವಾಸವಾಗಿದ್ದೇವೆ ಎಂದು ತೋರಿಸಲು ದಾಖಲೆಗಳು ಇವೆ. ಅವುಗಳನ್ನು ನ್ಯಾಯಾಲಯ ಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ ಎಂಬ ಪ್ರಶ್ನೆಗೆ ನಾನು ಈಗಾಗಲೇ ದಾಖಲೆ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ.

4. ನನ್ನ ತಂದೆಗೆ ಯಲಚಿಹಳ್ಳಿಯಲ್ಲಿ 9 ಎಕರೆ ಜಮೀನು ಇದೆ. ಸರ್ವೆ ನಂಬರ್ ಗೊತ್ತಿಲ್ಲ. ನಮ್ಮ ತಂದೆ ಹೆಸರಿನಲ್ಲಿ ಸೂಳೆಕೆರೆ ಪಕ್ಕ 1 ಎಕರೆ ಗದ್ದೆ ಇದೆ. ಅದರ ಸರ್ವೆ ನಂಬರ್ ಗೊತ್ತಿಲ್ಲ. ನಮ್ಮ ತಂದೆಗೆ ಸರ್ವೆ ನಂ47/36 1 ಎಕರೆ ಜಮೀನು ಸೋನಹಳ್ಳಿ ಗ್ರಾಮ ಬಿಳಿಕೆರೆ ಹೋಬಳಿ ಹುಣಸೂರು ತಾಲೋಕಿನಲ್ಲಿ ಜಮೀನು ಇದೆ ಎಂದರೆ ಸರಿ. ಸದರಿ ಜಮೀನಿನಲ್ಲಿ ನಮ್ಮ ಅಣ್ಣ ಸಿದ್ದಯ್ಯ ನ ಹಿರಿಯ ಹೆಂಡತಿ ಹಾಗೂ ಕಿರಿಯ ಹೆಂಡತಿ ಮಕ್ಕಳು ವ್ಯವಸಾಯ ಮಾಡುತ್ತಿದ್ದಾರೆ . ಸದರಿ ಜಮೀನಿನ ದಾಖಲೆಗಳು ಯಾರ ಹೆಸರಿನಲ್ಲಿ ಇದೆ ನನಗೆ ಗೊತ್ತಿಲ್ಲ. ಸದರಿ ಜಮೀನು ನನ್ನ ತಂದೆ ಹೆಸರಿನಲ್ಲಿ ಇದೆ ಎಂದರೆ ಸುಳ್ಳು. ಸದರಿ ಜಮೀನನ್ನು ನಮ್ಮ ಅಣ್ಣ ಸಿದ್ದಯ್ಯ ನ ಹಿರಿಯ ಹೆಂಡತಿ ಹಾಗೂ ಕಿರಿಯ ಹೆಂಡತಿ ಮಕ್ಕಳು ವ್ಯವಸಾಯ ಮಾಡುತ್ತಿದ್ದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.

5. ನನ್ನ ತಂದೆ ಮತ್ತು ಅವರ ಮಕ್ಕಳ ಬಗ್ಗೆ ಭಾಗ ಆಗಿರುವ ಬಗ್ಗೆ ನನಗೆ ಗೊತ್ತಿಲ್ಲ . ನನ್ನ ತಂದೆ ನನ್ನ ಹೆಸರಿಗೆ 1 ಎಕರೆ 30 ಗುಂಟೆ ಜಮೀನನ್ನು ಯಲಚಿಹಳ್ಳಿಯಲ್ಲಿ ಕೊಟ್ಟಿರುತ್ತಾರೆ. ನನ್ನ ತಂಗಿ ಪುಟ್ಟಮ್ಮ ಳಿಗೆ ನನ್ನ ತಂದೆ 4 ಎಕರೆ ಜಮೀನು ಯಲಚಿಹಳ್ಳಿಯಲ್ಲಿ ಕೊಟ್ಟಿರುತ್ತಾರೆ. ಸದರಿ ವಿಭಾಗ ಬರವಣಿಗೆಯಲ್ಲಿ ಆಗಿರುವುದಿಲ್ಲ ಮೌಖಿಕವಾಗಿ ಆಗಿರುತ್ತದೆ. ನನ್ನ ತಂದೆ ಯಾವುದೇ ಮನೆ ಕಟ್ಟಿಲ್ಲ. ನಮ್ಮ ತಂದೆಗೆ ಸಂಬಂದಪಟ್ಟಂತೆ 3 ಸೈಟ್ ಗಳು ಇವೆ. ಸದರಿ

ಸೈಟುಗಳಲ್ಲಿ ಬೋರಯ್ಯನಿಗೆ 1 , ಜದೊಡ್ಡಸಿದ್ದಯ್ಯನಿಗೆ 1 ಸೈಟು ಮತ್ತು ಸಿದ್ದಯ್ಯನಿಗೆ ಇನ್ನೊಂದು ಸೈಟನ್ನು ನೀಡಿರುತ್ತಾರೆ.

6. ಸಿದ್ದಯ್ಯನಿಗೆ 7 ಚಿಲ್ಲರೆ ಎಕರೆ ಜಮೀನು ಬಂದಿರುತ್ತದೆ. ದೊಡ್ಡಸಿದ್ದಯ್ಯನಿಗೆ 2 ವರೆ ಎಕರೆ ಜಮೀನು ಕುಳ್ಳಬೋರಯ್ಯ ನಿಗೆ ಎರಡೂವರೆ ಎಕರೆ ಜಮೀನು ಭಾಗವಾಗಿರುತ್ತದೆ. ಸದರಿ ವಿಭಾಗಕ್ಕೆ ಸಂಬಂದಪಟ್ಟಂತೆ ನನ್ನ ತಂದೆ ತಾಯಿ ಹಿರಿತನ ಮಾಡಿ ವಿಭಾಗ ಮಾಡಿಕೊಟ್ಟಿರುತಾ್ತೆ ಯಾವ ವರ್ಷ ವಿಭಾಗ ಮಾಡಿಕೊಟ್ಟಿರುತ್ತಾರೆ ನೆನಪಿಲ್ಲ.

7. ನನ್ನ ಗಂಡ ತೀರಿ ಹೋಗಿ 4 ವರ್ಷಗಳಾಗಿರುತ್ತವೆ. ಸರ್ವೆ ನಂ.14/4 ಯಲಚಿಹಳ್ಳಿ ಗ್ರಾಮದ 3 ಎಕರೆ 35 ಗುಂಟೆ ಜಮೀನು ಪ್ರತಿವಾದಿಗಳ ತಂದೆ ಸಿದ್ದಯ್ಯ ನವರಿಗೆ ಮಂಜೂರಾತಿಯಾದ ಜಮೀನು ಎಂದರೆ ಸರಿ. ಅದೇ ರೀತಿ ಸರ್ವೆ ನಂ.18 ರಲ್ಲಿ 3 ಎಕರೆ 26 ಗುಂಟೆ ಜಮೀನು ಸಿದ್ದಯ್ಯ ನವರಿಗೆ ಮಂಜೂರಾತಿಯಾದ ಜಮೀನು ಎಂದರೆ ಸರಿ. ಸಿದ್ದಯ್ಯ ಅವರು ಸದರಿ ಜಮೀನನ್ನು ತನ್ನ ಸ್ವಂತ ತಮ್ಮ ದೊಡ್ಡಸಿದ್ದಯ್ಯ ಅವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಅದೇ ರೀತಿ ಸದರಿ ಜಮೀನನ್ನು ಬಿಡಿಸಿಕೊಳ್ಳಲು ಸಿದ್ದಯ್ಯ ಅವರುದೊಡ್ಡಸಿದ್ದಯ್ಯ ಅವರ ವಿರುದ್ಧ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಅದೇ ರೀತಿ ಸದರಿ ಜಮೀನನ್ನು ದೊಡ್ಡಸಿದ್ದಯ್ಯ ನವರಿಗೆ ನೀಡಬೇಕು ಎಂದು ಉಪವಿಭಾಗಾಧಿಕಾರಿಯವರು ಆದೇಶ ಮಾಡಿರುತ್ತಾರೆ ಎಂದರೆ ಸರಿ. ಸದರಿ ಜಮೀನನ್ನು ಕುಳ್ಳಬೋರಯ್ಯ ವಿವೇಕಾನಂದ ಎನ್ನುವವರಿಗೆ ಮಾರಾಟ ಮಾಡಿದ್ದರು ಎಂದರೆ ಸರಿ. ಅದನ್ನು ಪುನ ಪಡೆದುಕೊಳ್ಳಲು ರತ್ನಯ ಅವರು ಪಿಟಿಸಿಎಲ್ ಕಾಯ್ದೆ ಪ್ರಕಾರ ಕೇಸ್ ಹಾಕಿದ್ದರು ಎಂದರೆ ಸರಿಯಿಲ್ಲ. ಇದೇ ನ್ಯಾಯಾಲಯ ದಲ್ಲಿ ಪ್ರತಿವಾದಿಗಳ ತಾಯಿ ಮತ್ತು ಪ್ರತಿವಾದಿಗಳು ಸೇರಿ ಇನ್ನೊಂದು ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿಯಿಲ್ಲ.

ಓ ಎಸ್ ಸಂಖ್ಯೆ: 101/2019

ಮುಂದುವರೆದ ಪಾಟೀ  ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.

(ಶಿರಿನ ಜಾವೀದ್ ಅನ್ಸಾರಿ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹುಣಸೂರು.

ಓ ಎಸ್ ಸಂಖ್ಯೆ: 101/2019